## ಮಾತು-ಕತೆ

● 'ಹಿಜಾಬ್'ನ ನಂತರ ಈಗ ಬರಹಗಾರನಾಗಿ ನಿಮ್ಮ ಮನಸ್ಸನ್ನು ಕಾಡುತ್ತಿರುವುದು ಏನು?

'ಹಿಜಾಬ್' ಬರೆಯುವ ಸಂದರ್ಭದಲ್ಲೇ ಒಂದಿಷ್ಟು ಕಥೆಗಳನ್ನು ಬರೆದಿದ್ದೆ. ಆ ಕಥೆಗಳಿಗೆ ರೀ ವಿಜಿಟ್ ಮಾಡ್ತಿದ್ದೇನೆ. ಹಿಜಾಬ್ ಬರವಣಿಗೆ ಏಳು ವರ್ಷಗಳ ಹಿಂದೆ ಶುರುವಾದ ಪ್ರಕ್ರಿಯೆ. ಬರೆಯುವ ಸಂದರ್ಭದಲ್ಲಿ ಕೆಲವೊಮ್ಮೆ ಕಾದಂಬರಿಯಿಂದ ಬ್ರೇಕ್ ತೆಗೆದುಕೊಳ್ಳಬೇಕು ಅನ್ನಿಸಿದಾಗಲೆಲ್ಲ ಕೆಲವು ಕಥೆಗಳನ್ನು ಬರೆದೆ. ಆದರೆ ಆ ಕಥೆಗಳು ಕೂಡ ಹಿಜಾಬ್ ಛಾಯೆಯಿಂದ ಹೊರಬರಲು ಸಾಧ್ಯವಾಗುತ್ತಿರಲಿಲ್ಲ. ಅವುಗಳಲ್ಲಿ ಕೂಡ ಹಿಜಾಬ್ ಛಾಯೆ ಕಾಣಿಸುತ್ತಿತ್ತು. ಕಾದಂಬರಿ ಮುಗಿಸಿದ ಮೇಲೆ ಈಗ ಆ ಕಥೆಗಳನ್ನು ಮತ್ತೆ ನೋಡುತ್ತಿರುವೆ. ಮತ್ತೊಂದು ಕಾದಂಬರಿ ಬಗ್ಗೆಯೂ ಯೋಚನೆ ಮಾಡುತ್ತಿರುವೆ.

ನಮ್ಮ ತಂದೆ ಕೊನೆಯವರೆಗೂ ತುಂಬಾ ಜೀವನೋಲ್ಲಾಸದಿಂದ ಬದುಕಿದವರು. ಅವರು ತಮ್ಮ ಉಲ್ಲಾಸವನ್ನು ತುಂಬಾ ಜನರಿಗೆ ಬಿಟ್ಟುಹೋದರು. ಅವರು ನಿರ್ಗಮಿಸಿದ ನಂತರ ಈಗ ಅದು ನನಗೆ ಅರ್ಥವಾಗುತ್ತಿದೆ. ಅವರನ್ನು ಕಟ್ಟಿಕೊಡಲು ಲಲಿತ ಪ್ರಬಂಧ ಸರಿಯಾದ ಮಾರ್ಗ ಅನ್ನಿಸುತ್ತಿದೆ. ಈಚೆಗೆ ಕೆಲವು ಪ್ರಬಂಧಗಳನ್ನು ಬರೆಯುತ್ತಿದ್ದೇನೆ.

● ಕಥೆಗಾರರಾಗಿ ಗುರ್ತಿಸಿಕೊಂಡು, ಈಚೆಗೆ ಕಾದಂಬರಿಯಲ್ಲಿ ಹೆಚ್ಚು ತೊಡಗಿಕೊಂಡಿದ್ದೀರಿ? ಕಾದಂಬರಿಯ ಬಗ್ಗೆ ವಿಶೇಷ ಸೆಳೆತ ಏಕೆ?

ಕಾದಂಬರಿ ನನಗೆ ಮೊದಲಿನಿಂದಲೂ ಇಷ್ಟ. ಓದಲಿಕ್ಕೂ ಕಾದಂಬರಿ ಇಷ್ಟ. ಅದರ ವಿಸ್ತಾರವಾದ ಕ್ಯಾನ್ವಾಸ್ ನನ್ನ ಬರವಣಿಗೆಗೆ ಒಗ್ಗುವಂತಹದ್ದು. ಯಾವುದನ್ನೇ ಆಗಲಿ, ಈಗ ಶುರು ಮಾಡಿ ಮುಗಿಸುತ್ತೇನೆ ಎನ್ನುವುದು ನನಗೆ ಕಷ್ಟ. ನನ್ನ ಮಟ್ಟಿಗೆ ಬರವಣಿಗೆ ಎವಾಲ್ವ್ ಆಗುತ್ತಾ ಹೋಗಬೇಕು. ಆಯಾ ಕಾಲದಲ್ಲಿ ನನ್ನ ಸುತ್ತಮುತ್ತಲಿನ ಜಗತ್ತಿನಲ್ಲಿ ನಡೆಯುವ ಪಲ್ಲಟಗಳು–ವಿದ್ಯಮಾನಗಳೇ ನನ್ನ ಕೃತಿಯನ್ನು ಬೆಳೆಸುತ್ತ ಹೋಗುತ್ತವೆ.

'ಹಿಜಾಬ್' ಬಗ್ಗೆ ಹೇಳುವುದಾದರೆ, ಆ ಕಾದಂಬರಿ ಬರೆಯುತ್ತಾ ಹೋದಂತೆ ನನ್ನ ಸುತ್ತಲಿನ ಪ್ರಪಂಚ ಸಾಕಷ್ಟು ಬದಲಾಗುತ್ತಾ ಹೋಯಿತು. ಅದಕ್ಕೆ ಸೃಜನಶೀಲವಾಗಿ ಪ್ರತಿಕ್ರಿಯಿಸದೆ ಇರಲು ಸಾಧ್ಯವೇ ಇರಲಿಲ್ಲ. ಕಾದಂಬರಿಯಲ್ಲಿನ ಸೋಮಾಲಿಯಾದ ಪಾತ್ರಗಳ ಅಸ್ತಿತ್ವ ಏನು ಎನ್ನುವ ಪ್ರಶ್ನೆ ಬಂದಾಗ – ಅವರು ಅಮೆರಿಕನ್ನರಾಗಬಹುದು, ಆದರೆ ಕಪ್ಪು ಮನುಷ್ಯರಾಗಿಯೇ ಉಳಿಯುತ್ತಾರೆ. ರಾಷ್ಟ್ರೀಯತಾವಾದದ ಚರ್ಚೆ ತಾರಕದಲ್ಲಿರುವಾಗ ಸೋಮಾಲಿಯದ ನಿರಾಶ್ರಿತರ ಮಾತಿರಲಿ, ಎಷ್ಟೋ ವರ್ಷಗಳಿಂದ ಅಮೆರಿಕಾದ ಪೌರರಾಗಿರುವವರು ಕೂಡ ನಮ್ಮನ್ನು ಅಲ್ಲಿನವರು ಒಪ್ಪಿಕೊಳ್ಳುವರೋ ಇಲ್ಲವೋ ಎನ್ನುವ ಗೊಂದಲ ಎದುರಿಸುವಂತಾಗಿದೆ. ಅಮೆರಿಕದ ಹಿಂದಿನ ಅಧ್ಯಕ್ಷರುಗಳಿಗೆ ಇಲ್ಲದ ಸವಾಲುಗಳು ಇಂದಿನ ಅಧ್ಯಕ್ಷರಿಗೆ ಇದೆಯಾ ಎಂದು ನೋಡಿದರೆ 'ಇಲ್ಲ' ಎನ್ನಿಸುತ್ತದೆ. ಈ ಘಟನೆಗಳೆಲ್ಲ ರಾಜಕೀಯ ನಿಲುವುಗಳಿಗೆ ಸಂಬಂಧಿಸಿದ್ದು.

● 'ಹಿಜಾಬ್'ಗೆ ಸಂಬಂಧಿಸಿದಂತೆ ನಿಮ್ಮನ್ನು ಕಾಡಿದ ಪ್ರಮುಖ ಸಂಗತಿಗಳು ಯಾವ ಬಗೆಯವು?

ಭಾರತದಲ್ಲಿ ಮೆಜಾರಿಟಿ ಕಮ್ಯುನಿಟಿಗೆ ಸೇರಿದವರು ಅಮೆರಿಕಾಗೆ ಹೋಗುವ ಸಂದರ್ಭ ನೆನಪಿಸಿಕೊಳ್ಳಿ. ಅವರು ಸೋಮಾಲಿಯಾ ಅಥವಾ ಸುಡಾನ್ ದೇಶದ ಪ್ರಜೆಗಳಂತೆ ನಿರಾಶ್ರಿತರಾಗಿ ಅಲ್ಲಿಗೆ ಹೋಗುವುದಿಲ್ಲ. ಅಮೆರಿಕಾಗೆ ಹೋಗುವ ನಮಗೆ ಇಂಗ್ಲಿಷ್ ಗೊತ್ತಿದೆ, ಈಗಾಗಲೇ ಒಂದು ಕೆಲಸ ಇರುತ್ತದೆ. ನಾವು ಒಂದಷ್ಟು ಗ್ರೇಸ್ ಮಾರ್ಕ್ಸ್ ತಗೊಂಡು